ರೈಲು ಸ್ಟೇಷನ್ನಿನ ವಿವರಣೆಯಂತೆ ಕಂಡಿತು. ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ.

**ಎಸ್‌. ಎನ್‌. ಭಟ್‌, ಹೊನ್ನಾವರ**

- ಪ್ರಸಾದ್ ಶೆಣೈ ಆರ್.ಕೆ. ಅವರ ಕಥೆಯಲ್ಲಿ ಶಿವರಂಜಿನಿ ರಾಗದ ಏರಿಳಿತ ಚೆಂದ ಹರಿದಾಡಿದೆ. ಸಾಗರ ಸೀಮೆಯ ಮುಳುಗಡೆ ಪ್ರದೇಶದ ಶರಾವತಿಯ ಒಡಲ ಬದುಕನ್ನು ವಿನಾಯಕ ಅರಳಸುರಳಿ ಅಂದಗಾಣಿಸಿದ್ದಾರೆ.

**ಎನ್‌.ಜಿ. ಭಂಡಾರ್ಕರ್‌, ಶಿವಮೊಗ್ಗ**

- 'ವಾಯು ಜೀವೋತ್ತಮ' ಜಿ.ಎಸ್. ರಂಗನಾಥ ರಾವ್ ಪ್ರಬಂಧ ಮುಪ್ಪಿನಲ್ಲಿ ಕಾಡುವ ವಯೋಸಹಜ ಕಾಯಿಲೆಗಳನ್ನು ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವುದನ್ನು ವಿವರಿಸುತ್ತದೆ. ತಪಾಸಣೆ ನೆಪದಲ್ಲಿ ಹಣ ಪೀಕುವ ಆಸ್ಪತ್ರೆಗಳ ತಂತ್ರಗಾರಿಕೆಯನ್ನು ಸೊಗಸಾದ ಹಾಸ್ಯದಲ್ಲಿ ನಿರೂಪಿಸಿದ್ದಾರೆ.

**ಎಂ.ಜಿ.ಆರ್‌, ಹಿರಿಯೂರು**

- ವಿಭಿನ್ನ, ವಿನೂತನ ಕಥೆಗಳನ್ನ ಹೊತ್ತು ಬಂದ ಸೆಪ್ಟೆಂಬರ್ ಸಂಚಿಕೆ ನನ್ನನ್ನು ಇನ್ನಿಲ್ಲದಂತೆ ಕಾಡಿತು. 'ಎರಡು ಕನಸು' ಮತ್ತು 'ಮಾತು ಮರೆತ ಮೌನ' ಕಥೆಗಳನ್ನು ಓದಿ ಮುಗಿಸಿದ ಮೇಲೆ ಎದೆಯ ಭಾವದಲ್ಲಿ ಶೂನ್ಯ ಕಾಡಿತು. ಲಲಿತ ಮಂಟಪ ಸುಲಲಿತವಾಗಿ ಮನ ತಟ್ಟಿತು. ಕಾವ್ಯ ಪ್ರಿಯರಿಗಂತೂ ಕವಿತೆಯ ಜೇನ ಸವಿ ಮನಸ್ಸಿನ ಆಂತರ್ಯ ಹೊಕ್ಕು ಮನವನ್ನು ಪುಳಕ ಮಾಡಿತು.

**ಮಾರುತಿ ಗೋಪಿಕುಂಟೆ, ಸಿರಾ**

---

ಅಕ್ಟೋಬರ್ 'ಮಯೂರ'ದಲ್ಲಿ ಪ್ರಕಟಗೊಂಡ ಸಿಂಪಿ ಲಿಂಗಣ್ಣ ಅವರ 'ಅಣ್ಣ–ಬಾಪು' ಏಕಾಂಕ ನಾಟಕ ಈಗಲೂ ಪ್ರಸ್ತುತವಾಗಿದ್ದು, ನಿಜಕ್ಕೂ ಈ ಬರಹ 'ಮಯೂರ'ದ ಈ ತಿಂಗಳ ಪುಟಬಂಗಾರವಾಗಿದೆ.

ಅಣ್ಣ(ಬಸವಣ್ಣ) ಕಲ್ಯಾಣರಾಜ್ಯ ಕಟ್ಟಲು ಹೋಗಿ ವಿಫಲರಾದರು. ಬಾಪು (ಗಾಂಧೀಜಿ) ರಾಮರಾಜ್ಯ ಕಟ್ಟಲು ಹೋಗಿ ವಿಫಲರಾದರು. ಆದರೆ ಬಾಪು, ಇಂದಿರಾ, ರಾಜೀವ ಹಾಗೂ ಕೆಲವು ವಿಚಾರವಾದಿಗಳನ್ನು ಮತ್ತು ಸಂಶೋಧಕರನ್ನು ಕೊಂದವರು ಯಾರು? ಅವರು ಹಿಂದೂಗಳಲ್ಲ. ಅಣ್ಣನ ಅವಸಾನವೂ ಹೇಗೆ ಆಯ್ತು ಎಂಬ ಬಗ್ಗೆ ಇನ್ನೂ ಚರ್ಚೆ ಇದೆ. ಅಣ್ಣ ಹಾಗೂ ಬಾಪು ಇಬ್ಬರೂ ರಾಮರಾಜ್ಯ ಕಟ್ಟಲು ಕನಸು ಕಂಡವರೇ. ಆದರೆ ಇಬ್ಬರ ಗುರಿ ಒಂದೇ ಆಗಿದ್ದರೂ ಮಾರ್ಗಗಳು ಬೇರೆ ಬೇರೆ ಆಗಿದ್ದವು. ಈ ಏಕಾಂಕ ನಾಟಕದಲ್ಲಿ ಇದು ನಿಚ್ಚಳವಾಗಿ ಪ್ರಕಟವಾಗಿದೆ. ಅವರಿಬ್ಬರ ಒಳ ಹಾಗೂ ಹೊರ ಮುಖಗಳು ಇಲ್ಲಿ ಪ್ರಕಟವಾಗಿವೆ.

ಈ ನಾಟಕದ ಎರಡು ಸಂಭಾಷಣೆ ಗಳು ನನ್ನನ್ನು ಆಕರ್ಷಿಸಿದವು. ಅವು ಹೀಗಿವೆ:

ಬಾಪು: ಆದೇನೆ ಇರಲಿ. ನಮ್ಮಿಬ್ಬರಿಗೂ ಜೀವನದ ಸಂಗಾತಿಗಳಾಗಿದ್ದ ಮಹಿಳೆಯರಿಗೆ ನಾವಿಬ್ಬರೂ ಕೃತಜ್ಞರಾಗಿರಬೇಕಾಗಿದೆ. ಕಸ್ತೂರಬಾ ನನಗೆ ಸತ್ಯಾಗ್ರಹ ಕಲಿಸಿದ ಗುರು; ಸಹನೆ ಕಲಿಸಿದ ತಾಯಿ, ಕಷ್ಟದಲ್ಲಿ ಸಹಭಾಗಿಯಾದ ಗೆಳತಿ. ನೀಲಾಂಬಿಕೆ–ದೇವಿಯವರ ಬಗ್ಗೆ ನನಗಷ್ಟು ತಿಳಿಯದು.

ಅಣ್ಣ: ಬಸವಣ್ಣನು ಮಂತ್ರಿಪದದಲ್ಲಿ ಉಳಿದುಕೊಳ್ಳುವಂತೆ ಮಂತ್ರ ಹಾಕಿದವಳು ಆಕೆಯೇ. ಲಿಂಗಾಂಗ ಸಾಮರಸ್ಯದ ಸಾಧನದಲ್ಲಿ ಸಹಪಾಠಿ. ಭಕ್ತಿ ಮಾರ್ಗದಲ್ಲಿ ನನಗೂ ಒಂದಡಿ ಮುಂದೆ ನಡೆದು, ಕೈಹಿಡಿದು ಕರೆದವಳು. ಕಲ್ಯಾಣದಿಂದ ಕಪ್ಪಡಿಗೆ ಬಂದು ಸಂಗಮನಾಥನಲ್ಲಿ ಐಕ್ಯವಾಗುವ ಖಟಾಟೋಪವನ್ನು ನಾನು ಮಾಡಿದರೆ; ಆಕೆ ಕಲ್ಯಾಣದಲ್ಲಿಯೇ ಕುಳಿತು, ಅಂಗೈಯೊಳಗಿನ ಲಿಂಗದ ಮುಖಾಂತರವಾಗಿಯೇ ನನ್ನೊಡನೆ ಸಂಗನಲ್ಲಿ ಐಕ್ಯಳಾದಳು. ನೀಲಾಂಬೆ! ನೀಲಲೋಚನೆ! ಆದರೆ ಕಲ್ಯಾಣ ಕೊನೆಗೆ ಕಟಗೇರಿಯೇ ಆಯಿತು.

ಹಳೆಯ ಬರಹವನ್ನು ಮುದ್ರಿಸಿ, ಮತ್ತೊಮ್ಮೆ ಹೊಸದಾಗಿ ಓದಲು ಮತ್ತು ಯೋಚನೆಗೆ ಹಚ್ಚಲು ಕಾರಣರಾದ 'ಮಯೂರ'ಕ್ಕೆ ನನ್ನ ಅಭಿನಂದನೆಗಳು.

**ಕರೀಗೌಡ ಬೀಚನಹಳ್ಳಿ, ಬೆಂಗಳೂರು**